## ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಪಿರಿಯಾಪಟ್ಟಣ

**ಸಿ.ಸಿ. ಸಂಃ 13/2017**

**ಹೆಸರು** : **ಹೇಮಾವತಿ ಸಿ.ಪಿ.** **ಪಿಡಬ್ಲೂಃ 08**

**ತಂದೆ/ಗಂಡನ ಹೆಸರು** : **ಪುವಯ್ಯ ಕೆ.ಎಂ.**

**ವಯಸ್ಸು** : **56 ವರ್ಷ**

**ಉದ್ಯೋಗ** : **ಶಿಕ್ಷಕಿ**

**ವಾಸಸ್ಥಳ** : **ಕುಶಾಲನಗರ**

**ದಿಃ*19.09.2024* ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದೆ.**

**ಮುಖ್ಯ ವಿಚಾರಣೆಃ ಫಿರ್ಯಾದಿ ಪರ ವಕೀಲರಿಂದಃ**

ನಾನು ಕಳೆದ 31 ವರ್ಷದಿಂದ ಗಿರಗೂರು ಗ್ರಾಮದಲ್ಲಿ ಇರುವ ಮಿಳಿಂದ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೇನೆ. ದಿನಾಂಕಃ01-06-1993 ರಂದು ಸದರಿ ಶಾಲೆಯ ವ್ಯವಸ್ಥಾಪಕರವರು ಆರ್.ಎಸ್.ದೊಡ್ಡಣ್ಣ ರವರು ನನ್ನನು ಸಹ ಶಿಕ್ಷಕಿಯಾಗಿ ನೇಮಕ ಮಾಡಿಕೊಂಡಿರುತ್ತಾರೆ. ಆಗ ಆ ಶಾಲೆಯಲ್ಲಿ 1 ರಿಂದ 4 ನೇ ತರಗತಿ ವರೆಗೆ ಮಾತ್ರ ಇತ್ತು. 1995 ರಿಂದ ವಿದ್ಯಾರ್ಥಿಗಳಿಂದ ಪ್ರತಿ ವರ್ಷ ರೂ.200/- ಅಭಿವೃಧಿ ಶುಲ್ಕ ಮತ್ತು ಮಾಸಿಕ ಶುಲ್ಕ ರೂ.10/- ಸಂಗ್ರಹಿಸಲಾಗುತ್ತಿತ್ತು. ಈ ಬಗ್ಗೆ ಲಕ್ಕೆ ಪತ್ರವನ್ನು ಸಹ ಶಿಕ್ಷಕಿಯಾಗಿದ್ದ ಜಲಜಾಕ್ಷಿಯವರು ಒಂದು ನೋಟ್ ಬುಕ್ ನಲ್ಲಿ ಬರೆದುಕೊಳ್ಳುತ್ತಿದ್ದರು. ಸದರಿ ಹಣವನ್ನು ವ್ಯವಸ್ಥಾಪಕರಾಗಿದ್ದ ದೊಡ್ಡಣ್ಣನವರು ಜಲಜಾಕ್ಷಿ ರವರಿಂದ ಪಡೆದುಕೊಳ್ಳುತ್ತಿದ್ದರು. ವಿದ್ಯಾರ್ಥಿಗಳಿಂದ ಮಾಸಿಕ ಶುಲ್ಕದಿಂದ ಶಿಕ್ಷಕರಿಗೆ ವೇತನ ಕೊಡುತ್ತಿದ್ದರು. ಬೋಟಾ ಫಾರಂ ಮಾಲೀಕರಾದ ಅಶ್ರಫ್, ಲಾಮ ಮತ್ತು ಧರ್ಮ, ಕಾರ್ಡ್ ಸಂಸ್ಥೆರವರು ನಮ್ಮ ಶಾಲೆಯ ಶಿಕ್ಷಕರ ವೇತನಕ್ಕಾಗಿ ದಾನವಾಗಿ ಹಣ ಕೊಡುತ್ತಿದ್ದರು. ಆ ರೀತಿ ವಿದ್ಯಾರ್ಥಿಗಳಿಂದ ಮತ್ತು ದಾನಿಗಳಿಂದ ಹಣ ಸಂಗ್ರಹಿಸಿದ್ದ ಬಗ್ಗೆ ರಶೀತಿ ಕೊಡುತ್ತಿರಲಿಲ್ಲ. ಅದೇ ರೀತಿ 1995 ರಿಂದ 2005 ನೇ ಇಸವಿ ವರೆಗೆ ನಡೆದುಕೊಂಡು ಬಂದಿದೆ. ಪ್ರತಿ ವರ್ಷ ಮಾಸಿಕ ಮತ್ತು ಅಭಿವೃಧಿ ಶುಲ್ಕವನ್ನು ಹೆಚ್ಚಿಸಲಾಗುತ್ತಿತ್ತು. ಅಲ್ಲದೆ ಪ್ರತಿ ವರ್ಷ ಒಂದೂಂದು ತರಗತಿಯನ್ನು ಹೊಸದಾಗಿ ಪ್ರಾರಂಭಿಸಲಾಗಿದೆ ಮತ್ತು ತರಗತಿಗೆ ತಕ್ಕಂತೆ ಶಿಕ್ಷಕರನ್ನು ನೇಮಿಸಲಾಗಿದೆ.

2006 ನೇ ಇಸವಿಯಲ್ಲಿ ನಮ್ಮ ಶಾಲೆ ಸರ್ಕಾರದ ವೇತನ ಅನುದಾನಕ್ಕೆ ಆದೇಶ ಆಗಿರುವುದರಿಂದ ಪ್ರಾಥಮಿಕ ಶಾಲಾ ಶುಲ್ಕ ಸಂಗ್ರಹಿಸುವುದನ್ನು ನಿಲ್ಲಿಸಲಾಯಿತು. ಶಿಕ್ಷಕರಿಗೆ ಮಾಸಿಕ 200/- ವೇತನ ಕೊಡುತ್ತಿದ್ದರು. ಅನುದಾನಕ್ಕೆ ಒಳ ಪಡುವಾಗ ತರಗತಿಯಲ್ಲಿ ವಿದ್ಯಾರ್ಥಿಯ ಸಂಖ್ಯೆ ಕಡಿಮೆ ಇದ್ದುರಿಂದ ಪಕ್ಕದ ಹಳ್ಳಿಗಳಿಂದ ನಮ್ಮ ಶಾಲೆಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಹೊಸದಾಗಿ ವಾಹನ ಖರೀದಿಸಲು ಶಾಲಾ ವ್ಯವಸ್ಥಾಪಕರಾಗಿದ್ದ ಆರ್.ಎಸ್.ದೊಡ್ಡಣ್ಣ ರವರು ಎಲ್ಲಾ ಶಿಕ್ಷಕರ ಸಭೆಯನ್ನು ಕರೆದು 6 ಜನ ಶಿಕ್ಷಕರು ತಲಾ 25 ಸಾವಿರ ರೂಪಾಯಿ ಕೊಡಬೇಕೆಂದು ಹೇಳಿದರು. ಅದರಂತೆ ಎಲ್ಲಾ ಶಿಕ್ಷಕರು ದಿನಾಂಕಃ 25-05-2006 ರಂದು 25 ಸಾವಿರ ರೂಪಾಯಿ ಹಣ ಕೊಟ್ಟಿದ್ದಾರೆ. ವಾಹನಕ್ಕೆ ಸಂಬಂಧ ಪಟ್ಟ ಸಾಲದ ಹಣವನ್ನು ಕಂತಿನ ರೂಪಾದಲ್ಲಿ ಬ್ಯಾಂಕ್‌ಗೆ ಪಾವತಿಸಲು  ವಿದ್ಯಾರ್ಥಿಗಳಿಂದ ಸಂಗ್ರಹಿಸಿದ್ದ ಶುಲ್ಕದ ಹಣವನ್ನು ಉಪಯೋಗಿಸುವಂತೆ ವ್ಯವಸ್ಥಾಪಕರಾಗಿದ್ದ ಆರ್.ಎಸ್.ದೊಡ್ಡಣ್ಣ ರವರು ಹೇಳಿದ್ದರು. ನಂತರ ಶಿಕ್ಷಕರೇ ಪ್ರತಿ ತಿಂಗಳ ವಾಹನಕ್ಕೆ ಕಟ್ಟಬೇಕಾಗಿದ್ದ ಕಂತಿನ ಹಣವನ್ನು ತಲಾ 2000/- ರಂತೆ 6 ಜನ ಶಿಕ್ಷಕರು ಕಟ್ಟಬೇಕೆಂದು ತಿಳಿಸಿದರು. ಅದರಂತೆ ದಿನಾಂಕಃ 19-07-2006 ರಂದು ಪ್ರತಿಯೊಬ್ಬ ಶಿಕ್ಷಕರು ತಲಾ 2000/-ರೂಪಾಯಿಯನ್ನು ವ್ಯವಸ್ಥಾಪಕರಾಗಿದ್ದ ಆರ್.ಎಸ್.ದೊಡ್ಡಣ್ಣ ರವರಿಗೆ ಕೊಟ್ಟಿದ್ದೇವೆ. ಆ ಸಂಬಂಶಧದಲ್ಲಿ ನಾವು ಚೆಕ್ಕ್ ಮೂಲಕ ಹಣ ಕೊಡುತ್ತೇವೆ ಎಂದು ಹೇಳಿದಾಗ ಅವರು ಚೆಕ್ಕ್ ಮೂಲಕ ಕೊಡುವುದು ಬೇಡ ಹಣದ ಮೂಲಕ ಕೊಡುವಂತೆ ಹೇಳಿದರು. ಪುನಃ ದಿನಾಂಕಃ18-08-2006 ರಂದು 6 ಜನ ಶಿಕ್ಷಕರು ತಲಾ ರೂ.2000/- ರೂಪಾಯಿಯನ್ನು ವ್ಯವಸ್ಥಾಪಕರಾಗಿದ್ದ ಆರ್.ಎಸ್.ದೊಡ್ಡಣ್ಣ ರವರಿಗೆ ಕೊಟ್ಟಿದ್ದೇವೆ. ಹೀಗೆ ಕಂತುಗಳ ರೂಪದಲ್ಲಿ ಪ್ರತಿಯೊಬ್ಬ ಶಿಕ್ಷಕರು ರೂ.99,500/- ರೂಪಾಯಿಯನ್ನು ವ್ಯವಸ್ಥಾಪಕರಾಗಿದ್ದ ಆರ್.ಎಸ್.ದೊಡ್ಡಣ್ಣ ರವರಿಗೆ ಕೊಟ್ಟಿದ್ದೇವೆ. ಈ ರೀತಿ ನಾವೆಲ್ಲರೂ ಹಣ ಕೊಟ್ಟಿರುವ ಬಗ್ಗೆ  ನಮ್ಮ ಶಿಕ್ಷಣ ಸಂಸ್ಥೆಯ ಧರ್ಮದರ್ಶಿ ಗೋವಿಂದಯ್ಯ ನವರಿಗೆ ಪತ್ರದ ಮೂಲಕ ಮಾಹಿತಿ ಕೊಟ್ಟಿದ್ದೇನೆ. ಸದರಿ ಪತ್ರವನ್ನು ಈಗಾಗಲೇ ನಿ.ಪಿ.18 ರಲ್ಲಿ ಗುರುತಿಸಲಾಗಿದ್ದು. ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು **ನಿ.ಪಿ.18(ಡಿ)** ಎಂದು ಗುರುತಿಸಲಾಯಿತು.

ಹೀಗಿರುವಲ್ಲಿ ನಾವು ಕೆಲಸ ಮಾಡುತ್ತಿರುವ ಶಿಕ್ಷಣ ಸಂಸ್ಥೆಯನ್ನು ಆರ್.ಎಸ್.ದೊಡ್ಡಣ್ಣ ರವರು ಮಾತ್ರ ನಡೆಸುತ್ತಿದ್ದಾರೆ ಅಂತ ತಿಳಿದುಕೊಂಡಿದ್ದೇವು ಆದರೆ ಅವರು ಧರ್ಮದರ್ಶಿ ಮಂಡಳಿಯ ಸದಸ್ಯರು ಮಾತ್ರ ಎಂಬು ಎಂದು ತಿಳಿಯಿತು. ದಿನಾಂಕಃ 09-12-2009 ರಂದು ವ್ಯವಸ್ಥಾಪ ಧರ್ಮದರ್ಶಿ ಗೋವಿಂದಯ್ಯ ಮತ್ತು ಆರ್.ಎಸ್.ದೊಡ್ಡಣ್ಣ, ಲೆಕ್ಕ ಪರಿಶೋಧಕರಾಗಿದ್ದ ನಾಗಾನಂದ ಮತ್ತು ಪ್ರಾಥಮಿಕ ಹಾಗೂ ಪ್ರೌಡಶಾಲಾ ಶಿಕ್ಷಕರೆಲ್ಲರು ಸಭೆ ನಡೆಸಿ ಶಿಕ್ಷಣ ಸಂಸ್ಥೆಯನ್ನು ನೋಡಿಕೊಳ್ಳಲು ಆಡಳಿತ ವಿಭಾಗ, ಸಾಂಸ್ಕೃತಿಕ ಮತ್ತು ಶೈಕ್ಷಣಿ ವಿಭಾಗ, ಪ್ರಾಥಮಿಕ ಮತ್ತು ಶೈಕ್ಷಣಿ ವಿಭಾಗ ಅಂತ ಮೂರು ವಿಭಾಗ ಮಾಡಿಕೊಂಡೇವು. ಆಡಳಿತ ವಿಭಾಗದ ಲೆಕ್ಕಪತ್ರ ನೋಡಿಕೊಳ್ಳಲು ಶ್ರೀಮತಿ.ಆಶಾ ಪಿ.ಆರ್. ನೇಮಿಸಲಾಯಿತು. ಜಲಜಾಕ್ಷಿ ಹೆಚ್.ಎನ್. ರವರನ್ನು ಸಾಂಸ್ಕೃತಿಕ ಮತ್ತು ಶೈಕ್ಷಣಿಕ ವಿಭಾಗ ಮುಖ್ಯಸ್ಥರಾಗಿ ಹಾಗೂ ದಾಸ್ತಾನು ನನ್ನನು ಮುಖ್ಯಸ್ಥೇಯಾಗಿ ನೇಮಿಸಲಾಯಿತು. ಈ ಬಗ್ಗೆ ನಿ.ಪಿ.8 ರಂತೆ ಸುತ್ತೋಲೆ ಹೊರಡಿಸಲಾಯಿತು. ಅದಕ್ಕೆ ನಾನು ಕೂಡ ಸಹಿ ಮಾಡಿದ್ದೇನೆ. ಸದರಿ ಸಹಿಯನ್ನು **ನಿ.ಪಿ.8(ಡಿ)** ಎಂದು ಗುರುತಿಸಲಾಯಿತು.

ದಾಸ್ತಾನು ವಿಭಾಗಕ್ಕೆ ಸಂಬಂಧಿಸಿದ್ದ ಪಾತ್ರೆಗಳು ಆರ್.ಎಸ್.ದೊಡ್ಡಣ್ಣ ರವರ ಮನೆಯಲ್ಲಿ ಇತ್ತು. ಶಾಲಾ ವಾರ್ಷಿಕೊಸ್ಥವ ಮತ್ತು ಕ್ರಿಕೆಟ್ ಕುರ್ನಮೆಂಟ್ ನಡೆಯುತ್ತಿದ್ದರಿಂದ ಆ ಸಮಾರಂಭಕ್ಕೆ 3 ದಿನಗಳ ಕಾಲ ನಾನು ಅಡುಗೆ ಮಾಡಿಸಿಕೊಡಲು ನಾನು ಪಾತ್ರೆಗಳನ್ನು ಕೇಳಿದಾಗ ಎರಡು ಪಾತ್ರೆಗಳನ್ನು ಕೊಟ್ಟಿದ್ದರು. ಶಾಮಿಯಾನ ಮತ್ತು ಇನ್ನು ಕೆಲವು ಪಾತ್ರೆಗಳನ್ನು ಬಾಡಿಗೆಗೆ ತೆಗೆದುಕೊಂಡಿದ್ದೆ. ಶಾಲಾ ವಾರ್ಷಿಕೊಸ್ಥವ ಮತ್ತು ಕ್ರಿಕೆಟ್ ಕುರ್ನಮೆಂಟ್ ವಿದ್ಯಾರ್ಥಿಗಳಿಂದ ತಲಾ ರೂ.10/- ರೂಪಾಯಿ, ಹಾಗೂ ಎಲ್ಲಾ ದಾನಿಗಳಿಂದ ಶಿಕ್ಷಕರು ಹಣ ಸಂಗ್ರಹಿಸಿ ಅದನ್ನು ದೊಡ್ಡಣ್ಣ ರವರಿಗೆ ಕೊಟ್ಟಿದ್ದರು. ಅದಕ್ಕೆ ಅವರು ಯಾವುದೇ ರಶೀದಿ ಕೊಟ್ಟಿರಲಿಲ್ಲ. ಕ್ರಿಕೆಟ್ ಕುರ್ನಮೆಂಟ್ ಗೆ ಬೇಕಾಗಿದ್ದ ಪಾರಿತೋಶಕ ಮತ್ತು ಬಹುಮಾನಗಳನ್ನು ಅಶ್ರಫ್ ಎಂಬುವವರು ಕೊಡಿಸಿದ್ದರು.

2010 ರಲ್ಲಿ ನಮ್ಮ ಶಾಲಾ ಆವರ್ಣದಲ್ಲಿ ಬೆಳೆದಿದ್ದ ಸಪೋಟ, ಪರಂಗಿ, ಸೀಬೆ ಮರಗಳನ್ನು ಕಡಿದು ದೊಡ್ಡಣ್ಣ ರವರ ಮಾವ ಚನ್ನಯ್ಯ ರವರು ಶುಂಠಿ ಮತ್ತು ಜೋಳ ಬೆಳೆಯುತ್ತಿದ್ದರು. ಅದರಿಂದ ಬಂದ ಉತ್ಪತ್ತಿ ಹಣವನ್ನು ಶಾಲೆಗೆ ಕೊಡುತ್ತಿರಲಿಲ್ಲ. ಶಾಲೆಗೆ ಸಂಬಂಧಿಸಿದ ಪಾತ್ರೆಗಳನ್ನು ಕೊಡಬೇಕೆಂದು ದೊಡ್ಡಣ್ಣ ರವರ ಮನೆಗೆ ಶಿಕ್ಷಕರು ಹೋದಾಗ ಅವರು ಶಿಕ್ಷಕರಿಗೆ ಬೈದು ಪಾತ್ರೆಗಳನ್ನು ಕೊಟ್ಟಿದ್ದರು. ಈ ಬಗ್ಗೆ ನಾನು ನಮ್ಮ ಶಾಲಾ ವ್ಯವಸ್ಥಾಪಕ ಧರ್ಮದರ್ಶಿ ಗೋವಿಂದಯ್ಯ ರವರಿಗೆ ಪತ್ರ ಬರೆದಿದೆ. ಸದರಿ ಪತ್ರವನ್ನು ಈಗಾಗಲೆ ನಿ.ಪಿ.20 ಎಂದು ಗುರುತಿಸಲಾಗಿದೆ. ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು **ನಿ.ಪಿ.20(ಎ)** ಎಂದು ಗುರುತಿಸಲಾಯಿತು.

ನಮ್ಮ ಶಾಲೆಯಿಂದ ಸಂಗ್ರಹಿಸುವ ಎಲ್ಲಾ ಶುಲ್ಕಕ್ಕೆ ರಶೀದಿ ಕೊಡಬೇಕು ಹಾಗೂ ಶಾಲೆಯಿಂದ ಹಣ ಪಾವತಿಸಬೇಕಾದರೆ ಚೆಕ್ ಮೂಲಕವೇ ಪಾವತಿಸಬೇಕೆಂದು ತೀರ್ಮಾನ ಆಗಿತ್ತು ಆದರೆ ದೊಡ್ಡಣ್ಣ ರವರು ಆಶಾ ಪಿ.ಆರ್. ರವರಿಗೆ ಫೋನ್ ಮಾಡಿ ಸಂಗ್ರಹವಾದ ಹಣವನ್ನು ನನಗೆಕೊಡಬೇಕೆಂದು ಬೆದರಿಗೆ ಹಾಕಿದ್ದರು ಆದ್ದರಿಂದ ಈ ಬಗ್ಗೆ ವ್ಯವಸ್ಥಾಪಕ ಧರ್ಮದರ್ಶಿ ಗೋವಿಂದಯ್ಯ ರವರಿಗೆ ದೂರು ಬರೆದಿದ್ದೇವು. ಸದರಿ ದೂರನ್ನು ಈಗಾಗಲೆ ನಿ.ಪಿ.20(ಎ) ಎಂದು ಗುರುತಿಸಲಾಗಿದೆ. ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು **ನಿ.ಪಿ.20(ಸಿ)** ಎಂದು ಗುರುತಿಸಲಾಯಿತು.

ಶಾಲೆಯಿಂದ ಸುರೇಶ್ ಕುಮಾರ್ ಮತ್ತು ಕೃಷ್ಣ ಎಂಬುವವರು ಬೇರೆ ಕೆಲಸಗಳ ಉದ್ದೇಶಕ್ಕಾಗಿ ಹೊರಗಡೆ ಹೋಗುತ್ತಿದ್ದ ಕಾರಣ ಆ ರೀತಿ ಹೋಗ ಬಾರದೆಂದು ದೊಡ್ಡಣ್ಣ ರವರು ಬೈದಿದ್ದರು ಆದ್ದರಿಂದ ನಾನು ಮತ್ತು ಇತರೆ ಶಿಕ್ಷಕರು ವ್ಯವಸ್ಥಾಪಕ ಧರ್ಮದರ್ಶಿ ಗೋವಿಂದಯ್ಯ ರವರಿಗೆ ನಿ.ಪಿ.20(ಸಿ) ಪ್ರಕಾರ ದೂರು ಕೊಟ್ಟಿದ್ದೇವು. ಸದರಿ ದಾಖಲೆಯಲ್ಲಿ ಇರುವ ಸಾಕ್ಷಿಯ ಸಹಿಯನ್ನು **ನಿ.ಪಿ.20(ಇ)** ಎಂದು ಗುರುತಿಸಲಾಯಿತು.

ನಾವೆಲ್ಲರೂ ರೂ.99,500/-ಕೊಟ್ಟ ನಂತರ ಆರ್.ಎಸ್.ದೊಡ್ಡಣ್ಣ ರವರು ಪ್ರತಿಯೊಬ್ಬ ಶಿಕ್ಷಕರಿಂದ ತಲಾ 2 ಲಕ್ಷ ರೂಪಾಯಿ ಕೇಳಿದ್ದರು.

ಆದ್ದರಿಂದ ಹಣ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದು ವ್ಯವಸ್ಥಾಪಕ ಧರ್ಮದರ್ಶಿ ಗೋವಿಂದಯ್ಯ ರವರಿಗೆ ನಿ.ಪಿ.20(ಇ) ಪ್ರಕಾರ ದೂರು ಕೊಟ್ಟಿದ್ದೇವು. ಸದರಿ ದಾಖಲೆಯಲ್ಲಿ ಇರುವ ಸಾಕ್ಷಿಯ ಸಹಿಯನ್ನು **ನಿ.ಪಿ.20(ಎಫ್)** ಎಂದು ಗುರುತಿಸಲಾಯಿತು.

ಶಿಕ್ಷಕರಾದ ನಾವು ವಿದ್ಯಾರ್ಥಿಗಳನ್ನು ಶಾಲೆಗೆ ದಾಖಲು ಮಾಡುವಾಗ ಚೆನ್ನಯ್ಯ ನವರು ನಮ್ಮನು ಕುರಿತು ವಿದ್ಯಾರ್ಥಿಗಳನ್ನು ದಾಖಲು ಮಾಡಲು ನಿಮಗೆ ಯಾರು ಅನುಮತಿ ಕೊಟ್ಟಿದ್ದಾರೆ ಅಂತ ಬೈದರು. ಆ ಬಗ್ಗೆ ಪೋಲಿಸರು ಬಂದು ಗಲಾಟೆ ಮಾಡಬಾರದೆಂದು ಚೆನ್ನಯ್ಯ ರವರನ್ನು ಕಳುಹಿಸಿದರು. ವಿದ್ಯಾರ್ಥಿಗಳಿಂದ ಸಂಗ್ರಹಿಸುತ್ತಿದ್ದ ಶಾಲಾ ಶುಲ್ಕದ ಬಗ್ಗೆ ರಶೀದಿ ಕೊಡುತ್ತಿಲ್ಲವೆಂದು ಪೋಷಕರು ನಮಗೆ ತಿಳಿಸಿದಾಗ ಅದನ್ನು ನಾವು ಆರ್.ಎಸ್.ದೊಡ್ಡಣ್ಣ ನವರಿಗೆ ತಿಳಿಸಿದಾಗ ಅವರು ರಶೀದಿ ಕೊಡುವುದು ಬೇಡ ಅಂತ ಹೇಳಿದರು. ಆದ್ದರಿಂದ ಈ ಬಗ್ಗೆ ವ್ಯವಸ್ಥಾಪಕ ಧರ್ಮದರ್ಶಿ ರವರಿಗೆ ನಿ.ಪಿ.20(ಜಿ) ಪ್ರಕಾರ ದೂರು ನೀಡಿದ್ದೇವೆ. ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು **ನಿ.ಪಿ.20(ಹೆಚ್)** ಎಂದು ಗುರುತಿಸಲಾಯಿತು.

2001 ರಿಂದ 2005 ರವರೆಗೆ ಸಂಗ್ರಹಿಸಿದ್ದ ಡೊನೇಷನ್ ಹಣವನ್ನು ಆರ್.ಎಸ್.ದೊಡ್ಡಣ್ಣ ರವರಿಗೆ ಕೊಟ್ಟಿರುವುದನ್ನು ವ್ಯವಸ್ಥಾಪಕ ಧರ್ಮದರ್ಶಿ ರವರಿಗೆ ಪತ್ರ ಬರೆದಿದ್ದೇನೆ ಅದರನ್ನು ಈಗಾಗಲೆ ನಿ.ಪಿ.20(ಐ) ಎಂದು ಗುರುತಿಸಲಾಗಿದೆ. ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು **ನಿ.ಪಿ.20(ಜೆ)** ಎಂದು ಗುರುತಿಸಲಾಯಿತು.

ವಿಚಾರಣಾಧಿಕಾರಿ ಮುಂದೆ ನಾನು ಹೇಳಿಕೆ ಕೊಟ್ಟಿರುತ್ತೇನೆ. ಸದರಿ ಹೇಳಿಕೆಯನ್ನು **ನಿ.ಪಿ.41(ಡಿ)** ಹಾಗೂ ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು **ನಿ.ಪಿ.41(ಡಿ)(ಇ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಸಮಯ ಕೋರಿದ್ದು ಮುಂದೂಡಲಾಯಿತು.**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)*

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***

**ಪಿರಿಯಾಪಟ್ಟಣ**